ನಮ್ಮಂಗಾಗಲಿಲ್ಲ" ಎಂದು ಸಂತಸಪಟ್ಟಿದ್ದರು. ಆಗಲೇ ಚಂದ್ರುವಿಗೆ ದುಬೈನಲ್ಲಿ ಕೆಲಸ ದೊರೆತಿತ್ತು. ತಕ್ಷಣ ಹೊರಟು ನಿಂತಿದ್ದ. "ದೂರದೇಶ... ಅಲ್ಲೆ ಹೆಂಗಿರತೀಯೋ?..." ಎಂದು ಕೇಳಿದ್ದೆ. "ಇರಬೇಕು... ರಾಶಿರಾಶಿಗಟ್ಲೆ ಘಳಸಬೇಕು. ಅವ್ವಾ ಅಪ್ಪನ್ನ ಛೊಲೊ ನೋಡಕೊಬೇಕು. ಹೆಂಡ್ತಿನ್ನೂ ಹೂವಿನ್ಹಂಗ ಹಿಡೀಬೇಕು. ಅದಕ್ಕ ಅವಕಾಶ ಸಿಕ್ಕಾಗ ಹೋಗಬೇಕು" ಎಂದು ಕಣ್ಣು ಮಿಟುಕಿಸಿ ನಕ್ಕಿದ್ದ. ನನಗೆ ನಗಲಾಗದೇ... ಅಳಲೂ ಆಗದೇ ಮೌನವಾಗಿ ದುಃಖಿಸಿದ್ದೆ.

ಮುಂದಿನ ದಿನಗಳಲ್ಲಿ ಸರಜಕ್ಕನ ಅದೃಷ್ಟ ಖುಲಾಯಿಸಿತ್ತು. ವರ್ಷದ ನಂತರ ಚಂದ್ರು ಬಂದವ ಮೊದಲಿನಂತಿರಲಿಲ್ಲ. ಕತ್ತಿನಲ್ಲಿ ಹಗ್ಗದಂಥ ದಪ್ಪದ ಚಿನ್ನದ ಚೈನು ತೊಟ್ಟು ಗಂಭೀರವಾಗಿ ಮಿಂಚುತ್ತಿದ್ದ. ಮನೆಯ ಜನರಿಗೆಲ್ಲ ರಾಶಿ ಉಡುಗೊರೆಗಳನ್ನು ಹೊತ್ತು ಬಂದಿದ್ದ. ಸರಜಕ್ಕನ ಕೊರಳಲ್ಲಿ ಎರಡೆಳೆ ಸರ, ಬಾಬೂರಾಯರ ಕೈಯಲ್ಲಿ ಚಿನ್ನದ ಬೆಲ್ಟಿನ ವಾಚು... ಪಾಟೀಲರಂತೂ ಅವನನ್ನು ಆಕಾಶಕ್ಕೇರಿಸಿ ಹೊಗಳುತ್ತಿದ್ದರು. ಸರಜಕ್ಕ ನಗುತ್ತ ಬಂದು ಅಮ್ಮನಿಗೆ ಸರ, ವಾಚು ತೋರಿಸಿ, "ನಮಗೂ ಛೊಲೊ ದಿವಸ ಬಂದೂ ಅನಸ್ತದ" ಎಂದು ಕಣ್ತುಂಬಿಕೊಂಡು ಹೋಗಿದ್ದರು. ಇದನ್ನೆಲ್ಲ ನೋಡಿದ ನಳಿನಿ ತುಸು ಮೆತ್ತಗಾಗಿದ್ದಳು. ಗುಟ್ಟಾಗಿ ನನಗೊಂದು ಸೆಂಟ್ ಬಾಟಲಿ ತಂದು ಕೊಟ್ಟ ಚಂದ್ರು, "ಮುಂದಿನ ಸಲಾ ಬರೋ ಮುಂದ ಏನ ತರ್ಲಿ ಹೇಳು?" ಎಂದು ಕೇಳಿದ್ದ. "ಹೇ... ಏನೂ ಬ್ಯಾಡಪಾ..." ಎನ್ನುತ್ತ ನಾನು ನಾಚಿ ನೀರಾಗಿದ್ದೆ. ಸರಜಕ್ಕ ತಿಂಡಿಗಳನ್ನೆಲ್ಲ ಕಟ್ಟಿ ಮಗನನ್ನು ಕಳಿಸಿಕೊಟ್ಟಿದ್ದರು. ಮದುವೆಯ ಯೋಚನೆ ತಲೆಯಲ್ಲಿತ್ತೆನಿಸುತ್ತದೆ. ಅಮ್ಮನೊಂದಿಗೆ ಮೆತ್ತಗೆ

